


# ಆರ್ಯಭಟನಿಂದ ಆದಿತ್ಯನವರೆಗೆ

## ಭಾರತೀಯ ಉಪಗ್ರಹ ಕಾರ್ಯಕ್ರಮಕ್ಕೆ ಸುವರ್ಣ ಸಂಭ್ರಮ

**ಭಾರತದ ಪ್ರಪ್ರಥಮ ಉಪಗ್ರಹ ಆರ್ಯಭಟ ಅಂತರಿಕ್ಷಕ್ಕೆ ತೆರಳಿದ ಘಟನೆಯ ಸುವರ್ಣ ಮಹೋತ್ಸವ ಸಂದರ್ಭದಲ್ಲಿ ಭಾರತದ ಉಪಗ್ರಹ ತಂತ್ರಜ್ಞಾನದ ವಿಕಾಸವನ್ನು, ಸಾಗಿಬಂದ ಹಾದಿಯನ್ನು, ಎದುರಿಸಿದ ಸವಾಲುಗಳನ್ನು, ಸಾಧನೆಗಳನ್ನು ಮೆಲುಕು ಹಾಕುವ ಈ ಬರಹ, ಭಾರತದ ಬಾಹ್ಯಾಕಾಶ ಕ್ಷೇತ್ರದ ಇತಿಹಾಸದ ಪುಟಗಳನ್ನೂ ಸ್ಮರಿಸುತ್ತದೆ.**

■ ಡಾ. ಬಿ.ಆರ್. ಗುರುಪ್ರಸಾದ್
ಚಿತ್ರಗಳ ಕೃಪೆ: ಇಸ್ರೋ

1972ನೇ ಇಸವಿಯ ಪೂರ್ವಾರ್ಧ. ಡಾ. ವಿಕ್ರಂ ಸಾರಾಭಾಯಿ ಸ್ಥಾಪಿಸಿದ ಅಹಮದಾಬಾದಿನಲ್ಲಿರುವ 'ಭೌತಿಕ ಸಂಶೋಧನಾ ಪ್ರಯೋಗಾಲಯ'ದಲ್ಲಿನ (ಫಿಸಿಕಲ್ ರಿಸರ್ಚ್ ಲ್ಯಾಬೊರೇಟರಿ – 'ಪಿಆರ್‌ಎಲ್') ಹಿರಿಯ ವಿಜ್ಞಾನಿಯೊಬ್ಬರು ಪ್ರಮುಖ ಕಾರ್ಯವೊಂದರ ಸಲುವಾಗಿ ಬೆಂಗಳೂರಿಗೆ ಬಂದಿಳಿದರು. ಅಚ್ಚ ಕನ್ನಡಿಗರೇ ಆಗಿದ್ದರೂ ಅವರ ಉನ್ನತ ಶಿಕ್ಷಣ, ವೃತ್ತಿ, ಎಲ್ಲವೂ ಕರ್ನಾಟಕದಾಚೆಯೇ ಆಗಿ ಅಮೆರಿಕ ಹಾಗೂ ಆಸ್ಟ್ರೇಲಿಯಾಗಳಲ್ಲಿ ಸಂದರ್ಶಕ ಪ್ರಾಧ್ಯಾಪಕರಾಗಿ ಅವರು ಕೀರ್ತಿ ಗಳಿಸಿದ್ದರು. ಬೆಂಗಳೂರಿನ ಬಗ್ಗೆ ಅವರಿಗೆ ಹೆಚ್ಚು ತಿಳಿದಿರಲಿಲ್ಲ.

ಬೆಂಗಳೂರಿನ ಟೆಲಿಫೋನ್ ಡೈರೆಕ್ಟರಿಯನ್ನು ತಿರುವಿ ಹಾಕುತ್ತಿದ್ದ ಅವರಿಗೆ ಅಂದಿನ ಮೈಸೂರು ರಾಜ್ಯದ ಹಿರಿಯ ಐಎಎಸ್ ಅಧಿಕಾರಿ ಹಾಗೂ ಕೈಗಾರಿಕಾ ಕಾರ್ಯದರ್ಶಿಗಳಾಗಿದ್ದ ಸತೀಶ್ ಚಂದ್ರನ್ ಅವರ ಹೆಸರು ಕಣ್ಣಿಗೆ ಬಿತ್ತು. ತಕ್ಷಣವೇ ಆ ವಿಜ್ಞಾನಿ ಅವರನ್ನು ಸಂಪರ್ಕಿಸಿದರು. ಭಾರತದ ಅಂತರಿಕ್ಷ ಕಾರ್ಯಕ್ರಮದ ಪ್ರಮುಖ ಯೋಜನೆಯೊಂದನ್ನು ಬೆಂಗಳೂರಿನಲ್ಲಿ ಸ್ಥಾಪಿಸುವ ಬಗ್ಗೆ ಚರ್ಚಿಸಿದರು. ಆಗ ಸತೀಶ್ ಚಂದ್ರನ್ ಅವರು, ಮೈಸೂರು ಸರ್ಕಾರ ಸ್ಥಾಪಿಸಿದ್ದ ಪೀಣ್ಯ ಕೈಗಾರಿಕಾ ಎಸ್ಟೇಟ್‌ನಲ್ಲಿ ಕೆಲವು ಶೆಡ್‌ಗಳು ಖಾಲಿಯಿದ್ದು, ಅವುಗಳನ್ನು ಆ ವಿಜ್ಞಾನಿ ನೋಡಬಹುದೆಂದರು.

ಆ ಶೆಡ್‌ಗಳನ್ನು ಕಂಡ ತಕ್ಷಣವೇ ವಿಜ್ಞಾನಿ ನಾಲ್ಕು ದೊಡ್ಡ ಶೆಡ್‌ಗಳನ್ನು ಕಾಯ್ದಿರಿಸಿದರು. ಅವುಗಳ ಒಳಾಂಗಣದಲ್ಲಿ ಅಗತ್ಯ ಬದಲಾವಣೆಗಳನ್ನು ಮಾಡಿ ಆಧುನಿಕ ವೈಜ್ಞಾನಿಕ/ತಾಂತ್ರಿಕ ಸೌಲಭ್ಯಗಳನ್ನು ಸ್ಥಾಪಿಸಿದರು. ಹೀಗೆ 1972ರ ಮಧ್ಯಭಾಗದ ಸುಮಾರಿನಲ್ಲಿ ಕೈಗಾರಿಕಾ ಶೆಡ್‌ಗಳ ಒಳಗೆ ಆರಂಭವಾದ ಭಾರತೀಯ ಅಂತರಿಕ್ಷ ಕಾರ್ಯಕ್ರಮದ ಆ ಯೋಜನೆ ಬೇರೇನೂ ಅಲ್ಲ, ಭಾರತದ ಮೊದಲ ಉಪಗ್ರಹದ ನಿರ್ಮಾಣ!

ಮುಂದೆ 'ಆರ್ಯಭಟ' ಹೆಸರನ್ನು ಪಡೆದ ಭಾರತದ ಆ ಮೊದಲ ಉಪಗ್ರಹ ಕಾರ್ಯಕ್ರಮವನ್ನು ಬೆಂಗಳೂರಿನಲ್ಲಿ ಆರಂಭಿಸಿ, ನಂತರದ ದಾಖಲೆ ಎನ್ನಿಸುವಂತಹ ಮೂರು ವರ್ಷಗಳಿಗೂ ಕಡಿಮೆಯ ಅಲ್ಪಾವಧಿಯಲ್ಲೇ